I/480739/2023

**ಕರ್ನಾಟಕ ಸರ್ಕಾರ**

**ನಿರ್ದೇಶಕರ ಕಛೇರಿ, ಶಾಲಾ ಶಿಕ್ಷಣ ಇಲಾಖೆ (ಪದವಿ ಪೂರ್ವ), 18ನೇ ಅಡ್ಡರಸ್ತೆ, ಮಲ್ಲೇಶ್ವರಂ, ಬೆಂಗಳೂರು-560012**

**ಇ-ಮೇಲ್:commissioner.pue@gmail.com ಸ್ಥಿರ ದೂರವಾಣಿ ಸಂ:080-23562033**

ಸಂಖ್ಯೆ:E-951406 DPUE-EST10OTRS/101/2022-PLCY

ದಿನಾಂಕ: 06-09-2023

**ಜ್ಞಾಪನ**

ವಿಷಯ: 2023-24ನೇ ಶೈಕ್ಷಣಿಕ ಸಾಲಿನಲ್ಲಿ ನಡೆಸಲಾದ ಶಾಲಾ ಶಿಕ್ಷಣ ಇಲಾಖೆಯ (ಸರ್ಕಾರಿ ಪದವಿ ಪೂರ್ವ ಕಾಲೇಜುಗಳ) ಸಾರ್ವತ್ರಿಕ ವರ್ಗಾವಣೆಯ ಕೌನ್ಸೆಲಿಂಗ್‌ನಲ್ಲಿ ಸ್ಥಳ ಆಯ್ಕೆ ಮಾಡಿಕೊಳ್ಳಲಾದ ಉಪನ್ಯಾಸಕರನ್ನು ವರ್ಗಾಯಿಸಿ, ಸ್ಥಳನಿಯುಕ್ತಿಗೊಳಿಸುವ ಬಗ್ಗೆ.

ಉಲ್ಲೇಖ:
1. ಸರ್ಕಾರದ ಪತ್ರ ಸಂಖ್ಯೆ: ಇಪಿ 94 ಎಸ್‌ಹೆಚ್‌ಹೆಚ್ 2022 ದಿನಾಂಕ:02/06/2023
2. ಈ ಕಚೇರಿಯ ಸಮ ಜ್ಞಾಪನ ಸಂಖ್ಯೆ ದಿನಾಂಕ:09.08.2023

-*-

ಸರ್ಕಾರದ ಪತ್ರ ಸಂಖ್ಯೆ: ಇಪಿ 94 ಎಸ್‌ಹೆಚ್‌ಹೆಚ್ 2022 ದಿನಾಂಕ:02/06/2023 ರಲ್ಲಿ ಸರ್ಕಾರಿ ಪದವಿ ಪೂರ್ವ ಕಾಲೇಜು, ಯರೇಹಳ್ಳಿ, ರಾಮನಗರ ತಾಲ್ಲೂಕು ಮತ್ತು ಜಿಲ್ಲೆ, ಈ ಕಾಲೇಜನ್ನು ಸರ್ಕಾರಿ ಪ್ರೌಢ ಶಾಲೆ, ಅಳ್ನಾವರ್, ಧಾರವಾಡ ಜಿಲ್ಲೆ ಇಲ್ಲಿಗೆ ಹುದ್ದೆ ಸಮೇತ ಸ್ಥಳಾಂತರಿಸಿ, ಸರ್ಕಾರಿ ಪದವಿ ಪೂರ್ವ ಕಾಲೇಜುಗಳನ್ನಾಗಿ ಮೇಲ್ದರ್ಜೆಗೇರಿಸಿ ಮಂಜೂರು ಮಾಡಲಾಗಿದೆ. ಆದುದರಿಂದ, ಸದರಿ ಕಾಲೇಜಿನ ಇತಿಹಾಸ, ಅರ್ಥಶಾಸ್ತ್ರ ಮತ್ತು ಭೂಗೋಳಶಾಸ್ತ್ರ **ವಿಷಯಗಳಲ್ಲಿ** ಉಪನ್ಯಾಸಕರಾಗಿ ಕಾರ್ಯ ನಿರ್ವಹಿಸುತ್ತಿರುವವರನ್ನು ಇತರೆ ಪದವಿ ಪೂರ್ವ ಕಾಲೇಜುಗಳಲ್ಲಿ ಖಾಲಿ ಇರುವ ಸಂಬಂಧಪಟ್ಟ ವಿಷಯಗಳ ಉಪನ್ಯಾಸಕರ ಹುದ್ದೆಗಳಿಗೆ ಕೂಡಲೇ ನಿಯೋಜನೆ ಮೇಲೆ ನೇಮಿಸಿ, ತದನಂತರದಲ್ಲಿ ಉಪನ್ಯಾಸಕರ ವೃಂದಕ್ಕೆ ನಡೆಸಲಾಗುವ ಸಾಮಾನ್ಯ ವರ್ಗಾವಣೆಯಲ್ಲಿ ಸದರಿಯವರುಗಳಿಗೆ ವರ್ಗಾವಣೆ ಮಾಡಿಕೊಳ್ಳಲು ಅವಕಾಶ ಕಲ್ಪಿಸಿ, ಇವರುಗಳಿಗೆ ಪ್ರಥಮವಾಗಿ ಇಲಾಖೆಯ ವರ್ಗಾವಣೆ ನಿಯಂತ್ರಣ ಕಾಯ್ದೆಯನ್ವಯ ಕೌನ್ಸಿಲಿಂಗ್ ಮೂಲಕ ಖಾಲಿಯಿರುವ ಹುದ್ದೆಗಳಿಗೆ ವರ್ಗಾವಣೆ ಮಾಡಲು ಕ್ರಮವಹಿಸುವಂತೆ ಉಲ್ಲೇಖ-01ರಲ್ಲಿ ನಿರ್ದೇಶಿಸಲಾಗಿರುತ್ತದೆ.

ಸರ್ಕಾರದ ನಿರ್ದೇಶನದನ್ವಯ ಸದರಿ ಉಪನ್ಯಾಸಕರನ್ನು ವಿಶೇಷ ಪ್ರಕರಣದಡಿಯಲ್ಲಿ ಪರಿಗಣಿಸಿ, ದಿನಾಂಕ:10/08/2023 ರಂದು ಆನ್‌ಲೈನ್‌ನಲ್ಲಿ KSWAN ಮೂಲಕ ನಡೆಯುವ ವರ್ಗಾವಣೆ ಕೌನ್ಸೆಲಿಂಗ್‌ನಲ್ಲಿ ಸಿ-ವಲಯದಲ್ಲಿ ಖಾಲಿ ಇರುವ ಶಾಲಾ ಶಿಕ್ಷಣ ಇಲಾಖೆ (ಸರ್ಕಾರಿ ಪದವಿ ಪೂರ್ವ ಕಾಲೇಜು) ಕಾಲೇಜನ್ನು ಆಯ್ಕೆ ಮಾಡಿಕೊಳ್ಳಲು ಉಲ್ಲೇಖ-02ರಂತೆ ಅವಕಾಶ ಕಲ್ಪಿಸಲಾಗಿತ್ತು.

ಅದರಂತೆ, ಆನ್‌ಲೈನ್ ಕೌನ್ಸೆಲಿಂಗ್‌ನಲ್ಲಿ ಸ್ಥಳ ಆಯ್ಕೆ ಮಾಡಿಕೊಂಡ ಈ ಕೆಳಕಂಡ ಉಪನ್ಯಾಸಕರ ಹೆಸರಿನ ಮುಂದೆ ನಮೂದಿಸಿರುವ ಶಾಲಾ ಶಿಕ್ಷಣ ಇಲಾಖೆ (ಸರ್ಕಾರಿ ಪದವಿ ಪೂರ್ವ ಕಾಲೇಜಿಗೆ), ಷರತ್ತುಗಳಿಗೊಳಪಡಿಸಿ ಸ್ಥಳನಿಯುಕ್ತಿಗೊಳಿಸಿ ಆದೇಶಿಸಿದೆ.

| ಕ್ರ.ಸಂ | ನೌಕರರ ಹೆಸರು ಮತ್ತು ಪದನಾಮ ಶ್ರೀಮತಿ/ಶ್ರೀ | ಪ್ರಸ್ತುತ ಕಾರ್ಯ ನಿರ್ವಹಿಸುತ್ತಿರುವ ಕಾಲೇಜು | ಸ್ಥಳ ನಿಯುಕ್ತಿಗೊಳಿಸಿಲಾದ ಕಾಲೇಜು |
|---|---|---|---|
| 1. | ಮೀನಾಕ್ಷಿ,<br>ಇತಿಹಾಸ ಉಪನ್ಯಾಸಕರು | ಶಾಲಾ ಶಿಕ್ಷಣ ಇಲಾಖೆ (ಸರ್ಕಾರಿ ಪದವಿ ಪೂರ್ವ ಕಾಲೇಜು), | ಶಾಲಾ ಶಿಕ್ಷಣ ಇಲಾಖೆ (ಸರ್ಕಾರಿ ಪದವಿ ಪೂರ್ವ ಕಾಲೇಜು), ಮಾಕಳಿ, ಚನ್ನಪಟ್ಟಣ ತಾಲ್ಲೂಕು, ರಾಮನಗರ ಜಿಲ್ಲೆ |

| | | | |
|---|---|---|---|
| | | ಯರೇಹಳ್ಳಿ, | (BR0123) |
| 2. | ಮಂಜುಳಾ ಸಿ,<br>ಅರ್ಥಶಾಸ್ತ್ರ ಉಪನ್ಯಾಸಕರು | ರಾಮನಗರ ತಾಲ್ಲೂಕು ಮತ್ತು ಜಿಲ್ಲೆ<br>(BR0121) | ಶಾಲಾ ಶಿಕ್ಷಣ ಇಲಾಖೆ (ಸರ್ಕಾರಿ ಪದವಿ ಪೂರ್ವ ಕಾಲೇಜು), ಬೈರಮಂಗಲ ಬಿಡದಿ<br>ಹೋಬಳಿ ರಾಮನಗರ ಜಿಲ್ಲೆ<br>(BR0110) |
| 3. | ರಾಮಕೃಷ್ಣಯ್ಯ ಕೆ,<br>ಭೂಗೋಳಶಾಸ್ತ್ರ<br>ಉಪನ್ಯಾಸಕರು | | ಶಾಲಾ ಶಿಕ್ಷಣ ಇಲಾಖೆ (ಸರ್ಕಾರಿ ಪದವಿ ಪೂರ್ವ ಕಾಲೇಜು), ಕೋಡಂಬಳ್ಳಿ. ಚನ್ನಪಟ್ಟಣ ತಾಲ್ಲೂಕು, ರಾಮನಗರ ಜಿಲ್ಲೆ<br>(BR0083) |

**ಷರತ್ತು:-**

1. ವರ್ಗಾವಣೆ ಹೊಂದಿರುವ ಉಪನ್ಯಾಸಕರು ಈ ಆದೇಶ ಹೊರಡಿಸಿದ ಕೂಡಲೇ ಕರ್ತವ್ಯದಿಂದ ಬಿಡುಗಡೆಗೊಂಡು, ವರ್ಗಾವಣೆಗೊಂಡಿರುವ ಸ್ಥಳದಲ್ಲಿ ಕರ್ತವ್ಯಕ್ಕೆ ವರದಿ ಮಾಡಿಕೊಳ್ಳತಕ್ಕದ್ದು. ಕರ್ತವ್ಯದಿಂದ ಬಿಡುಗಡೆ/ವರದಿ ಮಾಡಿಕೊಳ್ಳದಿದ್ದವರ ಮೇಲೆ ನಿಯಮಾನುಸಾರ ಕ್ರಮ ಕೈಗೊಳ್ಳಲಾಗುವುದು.
2. ಉಪನ್ಯಾಸಕರ ವರ್ಗಾವಣೆಯು ಆನ್-ಲೈನ್ ಕೌನ್ಸೆಲಿಂಗ್ ಮೂಲಕ ಆಗಿರುವುದರಿಂದ, ಸ್ಥಳ ನಿಯುಕ್ತಿಗೊಳಿಸಿರುವ ಕಾಲೇಜನ್ನು ಮಾರ್ಪಾಡುಗೊಳಿಸಲು ಅವಕಾಶ ಇರುವುದಿಲ್ಲ.
3. ಉಪನ್ಯಾಸಕರ ವರ್ಗಾವಣೆಯು ಕೋರಿಕೆ ಮೇರೆಗೆ ಕೌನ್ಸೆಲಿಂಗ್ ಮೂಲಕ ಆಗಿರುವುದರಿಂದ ಪ್ರಯಾಣ ಭತ್ಯೆ ಹಾಗೂ ಸೇರಿಕೆ ಕಾಲಕ್ಕೆ ಅರ್ಹರಾಗುವುದಿಲ್ಲ.
4. ವರ್ಗಾವಣೆಗೊಂಡ ಕಾಲೇಜಿನಲ್ಲಿ ಅಗತ್ಯ ಕಾರ್ಯಭಾರ ಇಲ್ಲದಿದ್ದಲ್ಲಿ, ಅಗತ್ಯ ಕಾರ್ಯಭಾರವಿರುವ ಕಾಲೇಜಿಗೆ ನಿಯೋಜಿಸಲಾಗುವುದು.
5. ವರ್ಗಾವಣೆ ಹೊಂದಿರುವ ಉಪನ್ಯಾಸಕರು ಪ್ರಸ್ತುತ ಕಾರ್ಯನಿರ್ವಹಿಸುತ್ತಿರುವ ಕಾಲೇಜಿನ ಕರ್ತವ್ಯದಿಂದ ಬಿಡುಗಡೆ ಹೊಂದಿದ ಬಗ್ಗೆ ಹಾಗೂ ವರ್ಗಾವಣೆಗೊಂಡ ಕಾಲೇಜಿನ ಕರ್ತವ್ಯಕ್ಕೆ ಹಾಜರಾದ ಬಗ್ಗೆ ಸಂಬಂಧಿಸಿದ ಪ್ರಾಂಶುಪಾಲರು Departmental Portal ಮತ್ತು PUEEDSನ ಪ್ರಾಂಶುಪಾಲರ ಲಾಗಿನ್‌ನಲ್ಲಿ ನವೀಕರಿಸುವುದನ್ನು(Update) ಕಡ್ಡಾಯಗೊಳಿಸಿದೆ.

**Signed by Sindhu B Rupesh**
**Date: 06-09-2023 14:46:53**

ನಿರ್ದೇಶಕರು,
ಶಾಲಾ ಶಿಕ್ಷಣ ಇಲಾಖೆ (ಪದವಿ ಪೂರ್ವ).

**ಪ್ರತಿಯನ್ನು:**

1. ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆಯ ಆಪ್ತ ಕಾರ್ಯದರ್ಶಿಗಳಿಗೆ- ಮಾನ್ಯ ಸರ್ಕಾರದ ಪ್ರಧಾನ ಕಾರ್ಯದರ್ಶಿಯವರ ಗಮನಕ್ಕೆ ತರುವಂತೆ ಕೋರಿದೆ.
2. ನಿರ್ದೇಶಕರು, ಜಂಟಿ ನಿರ್ದೇಶಕರು (ಆಡಳಿತ), ಶಾಲಾ ಶಿಕ್ಷಣ ಇಲಾಖೆ (ಪದವಿ ಪೂರ್ವ). ಇವರ ಆಪ್ತ ಶಾಖೆಗೆ.
3. ಸಂಬಂಧಿಸಿದ ಜಿಲ್ಲಾ ಉಪ ನಿರ್ದೇಶಕರಿಗೆ - ಷರತ್ತುಗಳನ್ವಯ ಮುಂದಿನ ಅಗತ್ಯ ಕ್ರಮಕ್ಕಾಗಿ.
4. ಸಂಬಂಧಿಸಿದ ಪ್ರಾಂಶುಪಾಲರಿಗೆ - ಷರತ್ತುಗಳನ್ವಯ ಮುಂದಿನ ಅಗತ್ಯ ಕ್ರಮಕ್ಕಾಗಿ.
5. ಸಂಬಂಧಿಸಿದ ಉಪನ್ಯಾಸಕರಿಗೆ - ಪ್ರಾಂಶುಪಾಲರ ಮೂಲಕ.
6. ಸಹಾಯಕ ನಿರ್ದೇಶಕರು (ಇ-ಆಡಳಿತ)-ಇಲಾಖಾ ಜಾಲತಾಣದಲ್ಲಿ ಪ್ರಕಟಿಸಲು ಹಾಗೂ ಸಂಬಂಧಿಸಿದ ಜಿಲ್ಲಾ ಉಪ ನಿರ್ದೇಶಕರ ಕಚೇರಿಗೆ ಇ-ಮೇಲ್ ಕಳುಹಿಸುವುದು.

7. ಕಚೇರಿ ಪ್ರತಿ.